

# ಆತಂಕದ ಡಿಸ್ಪಾರೂನಿಯ

**ಲೈಂಗಿಕ ಕ್ರಿಯೆಗೆ ತೊಡಕಾದಾಗ ಪತಿ ಪತ್ನಿಯರ ನಡುವಿನ ಸಂಬಂಧ ಬಿರುಕು ಬಿಡಲಾರಂಭಿಸುತ್ತದೆ. ಈ ತೊಡಕಿಗೆ ಕಾರಣ ಮಹಿಳೆಯರಲ್ಲಿ ನೋವು ತುಂಬಿದ ಸಂಭೋಗ ಕ್ರಿಯೆ. ಸೂಕ್ತ ಚಿಕಿತ್ಸೆಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಂಡು ಸುಖಮಯ ಜೀವನ ನಡೆಸಬಹುದು.**

★ ಡಾ. ವೀಣಾ ಭಟ್, ಭದ್ರಾವತಿ

ಐವತ್ತೆಂಟು ವರ್ಷದ ಸದಾಶಿವಪ್ಪನವರು, ಐವತ್ತು ವರ್ಷದ ಹೆಂಡತಿ ಪಾರವ್ವನನ್ನು ಕರೆದುಕೊಂಡು ಬಂದಿದ್ದರು. ಅವರು ಆಪಾದನೆ ಮಾಡುತ್ತಾ 'ನೋಡಿ ಮೇಡಂ ಇವಳಿಗೆ ಗರ್ಭಕೋಶವನ್ನು ತೆಗೆದಾಗಿನಿಂದ ನಮ್ಮ ಸಂಪರ್ಕವೇ ಇಲ್ಲವಾಗಿದೆ. ಯೋನಿ ಮಾರ್ಗವೇ ಚಿಕ್ಕದಾಗಿ ಬಿಟ್ಟಿದೆ. ನಾನೇನು ಮಾಡಲಿ ಈ ವಯಸ್ಸಿನಲ್ಲಿ ಇನ್ನೊಂದು ಮದುವೆಯಾಗಲು ಸಾಧ್ಯವಾಗುತ್ತಾ? ಆಪರೇಷನ್ ಮಾಡಿದ ಡಾಕ್ಟರ್ ಹತ್ತಿರ ಹೋದಾಗ ನಾನು ಸರಿಯಾಗಿಯೇ ಮಾಡಿದ್ದೇನೆ ಅಂತ ಹೇಳ್ತಾರೆ. ಇದಕ್ಕೇನು ಪರಿಹಾರ ಇಲ್ಲವೆ?' ಎಂದು ತುಂಬಾ ಆತಂಕದಿಂದ ಹೇಳಿಕೊಂಡರು.

56 ವರ್ಷದ ಪ್ರಮೀಳಾ 'ನೋಡಿ ಮೇಡಂ ನನಗೆ ಜೀವನಾನೇ ಬೇಡ ಅನಿಸುತ್ತಿದೆ, ನಮ್ಮನೆಯವರು ಏನಾದರೂ ಹತ್ರ ಬಂದ್ರೆ ತುಂಬಾನೇ ನೋವಾಗುತ್ತೆ. ಮುಟ್ಟು ನಿಂತ ಮೇಲೆ ಈ ಸಮಸ್ಯೆ ಶುರುವಾಗಿದ್ದು. ಏನಾದ್ರು ಪರಿಹಾರ ಇದೆಯಾ?' ಎಂದು ಹೇಳುವಾಗ ಅವಳ ಕಣ್ಣಲ್ಲಿ ನೀರು ಬರುತ್ತಿತ್ತು.

ಉಮಾ–ವೆಂಕಟೇಶ್ ಅವರು ಮದುವೆಯಾಗಿ 9 ತಿಂಗಳಾದರೂ ಒಂದು ಬಾರಿಯೂ ಲೈಂಗಿಕ ಸಂಪರ್ಕ ಮಾಡಲು ಸಾಧ್ಯವೇ ಆಗಿರಲಿಲ್ಲ. 9 ತಿಂಗಳು ಕಷ್ಟಪಟ್ಟು ವಿಷಯವನ್ನು ಮುಚ್ಚಿಟ್ಟು ಈಗ ಮನೆಯವರೆಲ್ಲರೂ ಯಾಕೆ ನಿನ್ನ ಹೆಂಡತಿಗೆ ಗರ್ಭ ನಿಲ್ಲುತ್ತಿಲ್ಲವೆಂದು ಒತ್ತಾಯಿಸಿದಾಗ ಸಂಕೋಚದಿಂದಲೇ ವೈದ್ಯರ ಹತ್ತಿರ ತಪಾಸಣೆಗೆ ಬಂದಿದ್ದರು. ಉಮಾಳನ್ನು ಪರೀಕ್ಷಿಸಿದಾಗ ಅವಳಿಗೆ ಕನ್ಯಾಪೊರೆ ಗಟ್ಟಿಯಾಗಿದ್ದು ಸಣ್ಣ ಶಸ್ತ್ರಚಿಕಿತ್ಸೆಯಿಂದ ಸರಿಪಡಿಸಿದಾಗ ನಂತರ ದಿನಗಳಲ್ಲಿ ಇಬ್ಬರ ಸಂತೋಷಕ್ಕೆ ಪಾರವೇ ಇರಲಿಲ್ಲ.

ಆಹಾರ, ನಿದ್ರೆ, ಲೈಂಗಿಕತೆ ಇವು ಮನುಷ್ಯನ ಪ್ರಾಥಮಿಕ ಅವಶ್ಯಕತೆಗಳಾಗಿದ್ದರೂ ಲೈಂಗಿಕತೆ ವಿಷಯದಲ್ಲಿ ಮಹಿಳೆಯರು ಹೆಚ್ಚಿನ ಸಂದರ್ಭಗಳಲ್ಲಿ ಮುಕ್ತವಾಗಿ ವ್ಯವಹರಿಸುವುದೇ ಕಡಿಮೆ. ಎಲ್ಲವನ್ನು ಮುಚ್ಚಿಟ್ಟು, ಬಚ್ಚಿಟ್ಟು ಮಾಡುವುದೇ ಹೆಚ್ಚು. ಹೆಚ್ಚಿನ ಮಹಿಳೆಯರಿಗೆ ಹಲವು ಮಕ್ಕಳಾದವರಿಗೂ ಕೂಡ ಹೆಣ್ಣಿನ ಸಂತಾನೋತ್ಪತ್ತಿ ಅಂಗಗಳ ರಚನೆ ಹಾಗೂ ಕಾರ್ಯವೈಖರಿಗಳ ಬಗ್ಗೆ ಮತ್ತು ಲೈಂಗಿಕ ಕ್ರಿಯೆ ವಿವಿಧ ಹಂತಗಳ ಬಗ್ಗೆ ಕಲ್ಪನೆ ಹಾಗೂ ಜ್ಞಾನ ಏನೂ ಇರುವುದಿಲ್ಲ. ನಮ್ಮ ಸಮಾಜದಲ್ಲೂ, ಶಿಕ್ಷಣ ಪದ್ಧತಿಯಲ್ಲೂ ಈ ವಿಚಾರವಾಗಿ ಹೆಚ್ಚಿನ ಪ್ರೋತ್ಸಾಹ ದೊರೆಯುವುದಿಲ್ಲ. ಅದರ ಜೊತೆಗೆ ಹೆಣ್ಣಿನ ಜೀವನದ ಪುನರುತ್ಪತ್ತಿ ಹಂತಗಳಾದ ಗರ್ಭಧಾರಣೆ, ಬಾಣಂತನ, ಎದೆ ಹಾಲುಣಿಸುವಿಕೆ, ಮುಟ್ಟಿನ ಮುನ್ನ ಬರುವ ಬವಣೆ, ಋತುಬಂಧ ಇವೆಲ್ಲಾ ಸಂದರ್ಭಗಳಲ್ಲಿ ಆಗುವ ಹಾರ್ಮೋನುಗಳ